
**ಪುಟ್ಟಂಜ:** ಸ್ವಾಮಿ, ಮನೆಯಲ್ಲಿ ಶಾಂತಿ ಇರಬೇಕು ಅಂದ್ರೆ ಎಂತಹ ಹುಡುಗಿಯನ್ನು ಮದುವೆ ಆಗಬೇಕು?
**ಜ್ಯೋತಿಷಿ:** ಶಾಂತಿ ಹೆಸರಿನ ಹುಡುಗಿಯನ್ನು ಮದುವೆ ಆಗಬೇಕು.

**ಪುಟ್ಟಂಜ:** ಕಟ್ಟುಮಸ್ತಾಗಿ ಇದ್ದೀಯಾ. ಕುಸ್ತಿ ಅಭ್ಯಾಸ ಮಾಡೋದು ಒಳ್ಳೆಯದು.
**ಕುಮಾರ:** ಕುಸ್ತಿಯಲ್ಲಿ ನನಗೆ ಗಂಧಗಾಳಿಯೂ ಗೊತ್ತಿಲ್ಲ.
**ಪುಟ್ಟಂಜ:** ಕುಸ್ತಿಯಲ್ಲಿ ಗಂಧಗಾಳಿ ಇಲ್ವಲ್ಲ?

**ಪತ್ರಕರ್ತ:** ರಾಷ್ಟ್ರ ಪ್ರಶಸ್ತಿ ಪಡೆದಿದ್ದೀರಾ, ಜನತೆಗೆ ಯಾವ ಸಂದೇಶ ನೀಡುವಿರಿ?
**ಪ್ರಶಸ್ತಿ ಪುರಸ್ಕೃತ:** ನಾನು ಯಾವ ಸಂದೇಶವನ್ನು ನೀಡುವುದಿಲ್ಲ. ಯಾಕೆಂದರೆ ಜಾಣರಿಗೆ ಅದರ ಅಗತ್ಯವಿಲ್ಲ, ದಡ್ಡರಿಗೆ ಅರ್ಥವಾಗುವುದೇ ಇಲ್ಲ.

**ಪತ್ರಕರ್ತ:** ನಿಮ್ಮ ಆಡಳಿತದಲ್ಲಿ ಕಾಸು ಕೊಡದೆ ಕೆಲಸ ಆಗೋದು ದೂರದ ಮಾತು ಅಂತಿದ್ದಾರೆ ಜನ. ನೀವೇನಂತೀರಿ?
**ಶಾಸಕ:** ಅಡ್ಡಗೋಡೆ ಮೇಲೆ ದೀಪ ಇಡದೆ, ಎಷ್ಟು ದೂರ ಅಂತ ಹೇಳಿ.

**ಶಿಕ್ಷಣಾಧಿಕಾರಿ:** ಯಾಕ್ರೀ ತೆಂಗಿನ ಗಿಡವನ್ನು ಶಾಲಾ ಕಟ್ಟಡದ ಮ್ಯಾಲೆ ಹಾಕಿದ್ದೀರಾ?
**ಶಿಕ್ಷಕ:** ಕೆಳಗಡೆ ಹಾಕಿದ್ರೆ ದನಕರು, ಕುರಿ, ಮೇಕೆ ತಿಂದ್ ಬಿಡುತ್ತವೆ ಅಂತ ಸಾರ್!







ಕಾಂಗರೂಗಳಿಂದ ಗದೆ ಕಸಿದ ಹರಿಣಗಳು

**ಪುಟ್ಟಂಜ:** ಏನ್ ಸಾರ್ ಕಚೇರಿಗೆ ಆ ನಂಜುಂಡ ಪ್ರತಿದಿನವೂ ಅರ್ಧ ಗಂಟೆ ಮುಂಚಿತವಾಗಿಯೇ ತಪ್ಪದೆ ಬರುತ್ತಾನೆ?
**ಸಿದ್ಲಿಂಗ:** ಅದಾ, ಅವನ ಎಲೆಕ್ಟ್ರಿಕ್ ಸ್ಕೂಟರ್‌ನ ಚಾರ್ಜ್‌ಗೆ ಹಾಕೋಕೆ ಬಿಡಿ. ಇಲ್ಲಿ ಫ್ರೀ ಅಲ್ವಾ ಅದ್ಕೆ.

**ಪತ್ರಕರ್ತ:** ಜಾತಿಗಣತಿ ಪಾರದರ್ಶಕ ಆಗಿರಲು ಯಾವ ಕ್ರಮ ತೆಗೊಂಡಿದ್ದೀರಿ ಸಾರ್?
**ಸಚಿವ:** ಗಣತಿದಾರರಿಗೆ ಒಂದು ಕನ್ನಡಿಯನ್ನು ಕೊಡುವುದು ಅಂತ ನಿರ್ಧಾರ ಮಾಡಿದ್ದೀವಿ. ಅದಕ್ಕೂ ಬಜೆಟ್ ಮಾಡಿದ್ದೀವಿ.





ಶಾಂತಿದೂತನಾಗಲು ಪುತಿನ್ ಬಯಕೆ



ಅವರು ರಷ್ಯಾದ ಅಧ್ಯಕ್ಷ...
ಸಾಹಿತಿ ಪು.ತಿ.ನ. ಅಲ್ಲ

**ವೆಂಕಟ:** ಬಾಲಾಜಿ, ನಿಮ್ಮ ಇಬ್ಬರು ಗಂಡು ಮಕ್ಕಳಾದ ರಮೇಶ, ಸುರೇಶ ಏನು ಮಾಡಿಕೊಂಡಿದ್ದಾರೆ?
**ಬಾಲಾಜಿ:** ಮನೆ ಭಾಗ ಮಾಡಿಕೊಂಡಿದ್ದಾರೆ.




**ಗಂಡ:** ಸಂಜೆ ಆರರಿಂದ ರಾತ್ರಿ ಹತ್ತರವರೆಗೆ ಎಲ್ಲಾ ಧಾರಾವಾಹಿಗಳನ್ನು ಪ್ರತಿದಿನವೂ ನೋಡುತ್ತೀಯಲ್ಲ, ಅದರಿಂದ ನಿನಗೆ ಏನು ಬರುತ್ತೆ?
**ಹೆಂಡತಿ:** ನನಗೇನು ಬರಲ್ಲ. ಆದರೆ ನಿಮಗೆ ಬರತ್ತೆ.
**ಗಂಡ:** ನನಗೇನು ಬರುತ್ತೆ?
**ಹೆಂಡತಿ:** ಕರೆಂಟ್ ಬಿಲ್!

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ